# ಪಾತ್ರದಲ್ಲಿ ಸ್ಟ್ಯಾಂಡ್ ಔಟ್ ಆಗಬೇಕು



ತಾಯ್ತನದ ಖುಷಿಯೊಂದಿಗೆ ತಮ್ಮ ವೃತ್ತಿಜೀವನದಲ್ಲೂ ಸಮತೋಲನ ಕಾಯ್ದುಕೊಳ್ಳುತ್ತಿರುವ ನಟಿ ಮಿಲನಾ ನಾಗರಾಜ್ ಅಭಿನಯದ 'ಆರಾಮ್ ಅರವಿಂದ ಸ್ವಾಮಿ' ಈಚೆಗೆ ತೆರೆಕಂಡಿದೆ. ಅಭಿಷೇಕ್ ಶೆಟ್ಟಿ ನಿರ್ದೇಶನದಲ್ಲಿ ಮೂಡಿಬಂದಿರುವ ಈ ಸಿನಿಮಾದಲ್ಲಿ ಮಿಲನಾ, ಅನಿಶ್ ಜೊತೆ ನಟಿಸಿದ್ದಾರೆ. ಹೊಸ ಮುಖಗಳ ಜೊತೆ ಕಾಣಿಸಿಕೊಳ್ಳುವುದರ ಕುರಿತು ಖುಷಿ ಹಂಚಿಕೊಂಡಿರುವ ಅವರು, ತಮ್ಮ ಈ ಹೊಸ ಕಾಂಬಿನೇಷನ್ ಬಗ್ಗೆ ಉತ್ಸುಕರಾಗಿರುವುದಾಗಿ ಹೇಳಿದ್ದಾರೆ.

'ಅನಿಶ್ ಡೆಡಿಕೇಟೆಡ್ ನಟ. ತಾನು ಏನು ಮಾಡಬೇಕು ಎಂಬುದರ ಬಗ್ಗೆ ಅವರಿಗೆ ತುಂಬಾ ಸ್ಪಷ್ಟತೆ ಇದೆ. ಹೆಚ್ಚು ಮಾತಾಡದೆ ಇದ್ದರೂ ಸೆಟ್‌ನಲ್ಲಿ ನಮ್ಮ ನಡುವೆ ಒಂದು ಕಂಫರ್ಟ್ ಜೋನ್ ಸೃಷ್ಟಿಯಾಗಿತ್ತು. ಇದು ಕೆಲಸವನ್ನು ಸುಲಭಗೊಳಿಸಿತು' ಎಂದು ಸಹನಟನನ್ನು ಮೆಚ್ಚಿಕೊಂಡಿದ್ದಾರೆ.

ಈ ಸಿನಿಮಾದಲ್ಲಿ ಮಲೆಯಾಳಿ ಶಿಕ್ಷಕಿಯ ಪಾತ್ರದಲ್ಲಿ ಮಿಲನಾ ಕಾಣಿಸಿಕೊಂಡಿದ್ದಾರೆ. ಈ ಮುನ್ನ ಪ್ರೇಕ್ಷಕರು ತಮ್ಮನ್ನು ಕಂಡಿದ್ದ ಪಾತ್ರಕ್ಕಿಂತ ಭಿನ್ನ ಪಾತ್ರದಲ್ಲಿದ್ದು, ಇದು ತಮಗೂ ಹೊಸ ಅನುಭವ ನೀಡಿದ್ದಾಗಿ ತಿಳಿಸಿದ್ದಾರೆ.

'ಈ ಪಾತ್ರ ನನಗೆ ಹೊಸತಾಗಿತ್ತು. ಮಲೆಯಾಳಂ ಉಚ್ಚಾರಣೆ ಕಲಿಯಲು ಬಹಳ ಸರ್ಕಸ್ ಮಾಡಿದೆ. ಇಂಥ ಹೊಸ ಧಾಟಿಯ ಪಾತ್ರಗಳಿಗೆ ಎಂದಿಗೂ ನಾನು ಸಿದ್ಧ. ವರ್ಸಟಾಲಿಟಿ ಎಂಬುದು ಯಾರಿಗಿಷ್ಟವಿಲ್ಲ ಹೇಳಿ?' ಎಂದಿದ್ದಾರೆ.

'ಕೊಟ್ಟ ಪಾತ್ರದಲ್ಲಿ ಸ್ಟ್ಯಾಂಡ್ ಔಟ್ ಆಗುವುದು ತುಂಬಾ ಮುಖ್ಯ. ನನಗೆ ಸುಮ್ಮನೆ ಸಿನಿಮಾ ನೋಡಲು ಸಾಧ್ಯವಿಲ್ಲ. ಭಾವನೆಗಳನ್ನು ಕೆದಕುವಂಥ ಸಿನಿಮಾಗಳು ನನ್ನ ಆದ್ಯತೆಯಾಗಿರುತ್ತವೆ. ನಾನು ಪಾತ್ರಗಳೊಂದಿಗೆ ಒಂದಾಗಲು ಪ್ರಯತ್ನಿಸುತ್ತೇನೆ. ತುಂಬಾ ಆಳವಾಗಿ ಆ ಪಾತ್ರಗಳೊಂದಿಗೆ ತೊಡಗಿಕೊಳ್ಳಲು ಪ್ರಯತ್ನಿಸುತ್ತೇನೆ. ನಾನು ಇಂಥದ್ದನ್ನೇ ಬಯಸುವ ಪ್ರೇಕ್ಷಕಿ ಕೂಡ ಆಗಿರುವುದರಿಂದ, ಅದನ್ನೇ ಜನರಿಗೆ ನೀಡಲು ಬಯಸುತ್ತೇನೆ' ಎಂದು ಹೇಳಿದ್ದಾರೆ.



## ಸೂಪರ್ ಹೀರೊ ಕಿರಣ್ ರಾಜ್

ಈಚೆಗೆ 'ರಾನಿ' ಸಿನಿಮಾದಲ್ಲಿ ಮಿಂಚಿದ್ದ ನಟ ಕಿರಣ್ ರಾಜ್ ಈಗ ಬ್ಯಾಕ್ ಟು ಬ್ಯಾಕ್ ಸಿನಿಮಾಗಳಲ್ಲಿ ತೊಡಗಿಕೊಂಡಿದ್ದಾರೆ. 'ರಾನಿ' ಬಿಡುಗಡೆ ಬೆನ್ನಲ್ಲೇ ಅವರ ನಟನೆಯ 'ಮೇಘ' ಚಿತ್ರ ಕೂಡ ತೆರೆಗೆ ಬರಲು ಸಜ್ಜಾಗಿದ್ದು, ಈಗ ಮತ್ತೂ ಒಂದು ಹೊಸ ಸಿನಿಮಾ ಮಾಡುತ್ತಿದ್ದಾರೆ.

ಈ ಬಾರಿ 'ಸೂಪರ್ ಹೀರೊ' ಪರಿಕಲ್ಪನೆಯ ಕಥೆಯಲ್ಲಿ ಕಿರಣ್ ರಾಜ್ ಕಾಣಿಸಿಕೊಳ್ಳುತ್ತಿರುವುದಾಗಿ ತಿಳಿದುಬಂದಿದೆ. ಈ ಸಿನಿಮಾದಲ್ಲಿ ಕಿರಣ್ ರಾಜ್ ಮುಖ್ಯ ಭೂಮಿಕೆಯಲ್ಲಿದ್ದು, ಈ ಚಿತ್ರಕ್ಕೆ ಗುರುತೇಜ್ ಶೆಟ್ಟಿ ನಿರ್ದೇಶನವಿದೆ. 'ರಾನಿ' ಚಿತ್ರಕ್ಕೂ ಗುರುತೇಜ್ ಅವರದ್ದೇ ನಿರ್ದೇಶನವಿದ್ದು, ಮತ್ತೆ ಇವರಿಬ್ಬರ ಕಾಂಬಿನೇಷನ್‌ನಲ್ಲಿ ಸೂಪರ್ ಹೀರೊ ಕಥೆಯ ಸಿನಿಮಾ ಮೂಡಿಬರಲಿದೆ.

ಈ ನಡುವಲ್ಲೇ ಕಿರಣ್ ರಾಜ್ ಹಾಗೂ ಕಾಜಲ್ ಕುಂದರ್ ನಟನೆಯ 'ಮೇಘ' ಸಿನಿಮಾ ಕೂಡ ಬಿಡುಗಡೆಗೆ ಸಿದ್ಧವಾಗಿದೆ. ಚರಣ್ ರಾಜ್ ನಿರ್ದೇಶನದ ಈ ಸಿನಿಮಾ ಪ್ರೀತಿಯ ಹೊಸ ಕಥೆಯನ್ನು ಹೇಳಲು ಹೊರಟಿದೆ.

ವಿಭಿನ್ನ ಪಾತ್ರಗಳಲ್ಲಿ ತಮ್ಮನ್ನು ಕಂಡುಕೊಳ್ಳಬೇಕೆಂಬ ಒತ್ತಾಸೆಯಿಂದ ಕಿರುತೆರೆಯಿಂದ ಬೆಳ್ಳಿತೆರೆಗೆ ಬಂದಿರುವ ನಟ ಕಿರಣ್ ರಾಜ್ ಅವರಿಗೆ ಸೂಪರ್ ಹೀರೊ ಪರಿಕಲ್ಪನೆಯ ಈ ಹೊಸ ಕಥೆ ಇಷ್ಟವಾಗಿದ್ದು, ಮತ್ತಷ್ಟು ಸಿನಿಮಾ ಆಫರ್‌ಗಳು ಅವರ ಮುಂದಿವೆಯಂತೆ.